# ಸತತ ಪ್ರಯತ್ನ

ಸ್ವಾಮಿ ನಿತ್ಯಸ್ಥಾನಂದ

ಅಸಾಧ್ಯವೆಂಬ ಪದವನ್ನು ನಮ್ಮ ನಿಘಂಟಿನಿಂದ ತೆಗೆದುಹಾಕುವುದೇ ಯಶಸ್ಸಿಗೆ ಸುಲಭ ಉಪಾಯ. ಪ್ರಯತ್ನದಿಂದ ಎಲ್ಲವನ್ನೂ ಗಳಿಸಬಹುದು ಎಂದು ತಿಳಿಸಿರುವ ಪೂಜ್ಯರು ಈ ಪತ್ರಿಕೆಯ ಪ್ರಥಮ ಸಂಪಾದಕರು ಹಾಗೂ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು.

ಒಂದು ಪ್ರಸಿದ್ಧ ಸಂಸ್ಕೃತ ಶ್ಲೋಕ ಹೀಗಿದೆ:

ಉದ್ಯಮೇನ ಹಿ ಸಿಧ್ಯಂತಿ ಕಾರ್ಯಾಣಿ ನ ಮನೋರಥೈಃ ।
ನ ಹಿ ಸುಪ್ತಸ್ಯ ಸಿಂಹಸ್ಯ ಪ್ರವಿಶಂತಿ ಮುಖೇ ಮೃಗಾಃ ॥

"ಸಿಂಹವು ಎಷ್ಟೇ ಪರಾಕ್ರಮಿಯಾದರೂ, ಮೃಗರಾಜ ಎನಿಸಿಕೊಂಡಿದ್ದರೂ ಅದು ಸುಮ್ಮನೆ ಮಲಗಿಕೊಂಡಿದ್ದರೆ ಮೃಗಗಳು ಬಂದು ಬಾಯನ್ನು ಪ್ರವೇಶಿಸುವುದಿಲ್ಲ. ಹಾಗೆಯೇ ವ್ಯಕ್ತಿಯು ಕಾರ್ಯಸಿದ್ಧಿಗಾಗಿ ಪ್ರಯತ್ನಪಡಬೇಕು, ಸುಮ್ಮನೆ ಮನಸ್ಸಿನಲ್ಲಿ ಅದನ್ನು ಭಾವಿಸುವುದರಿಂದ ಏನೂ ಪ್ರಯೋಜನವಾಗುವುದಿಲ್ಲ."




ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ನಿಮ್ಮ ಭಾಗ್ಯದ ದಿನಗಳನ್ನು ರೂಪಿಸಿಕೊಳ್ಳಬೇಕಾದವರು ನೀವೇ! ಎದ್ದೇಳಿ, ಧೀರರಾಗಿ! ಬಲಾಢ್ಯರಾಗಿ! ಎಲ್ಲ ಬಗೆಯ ಹೊಣೆಗಾರಿಕೆಯನ್ನೂ ನೀವೇ ಕೈಗೆ ತೆಗೆದುಕೊಳ್ಳಿ. ನಿಮ್ಮ ಭವಿಷ್ಯದ ನಿರ್ಮಾಪಕರು ನೀವೇ ಎಂಬುದು ನಿಮಗೆ ತಿಳಿದಿರಲಿ. ನಿಮಗೆ ಅಗತ್ಯವಿರುವ ಶಕ್ತಿ, ಸಹಾಯ, ಸಾಮರ್ಥ್ಯಗಳೆಲ್ಲ ನಿಮ್ಮೊಳಗೆಯೇ ಇವೆ. ಆದ್ದರಿಂದ ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿಕೊಳ್ಳಿ."

ಜೀವನವನ್ನು ಕ್ರಿಯೆಯಿಂದ ಬೇರ್ಪಡಿಸಲಾಗುವುದಿಲ್ಲ. ಜೀವಿಸುವುದೆಂದರೆ ಕೆಲಸ ಮಾಡುವುದು ಎಂದರ್ಥ. ಸಂಪೂರ್ಣ ಕೆಲಸ ನಿಂತುಹೋದರೆ ಅದೇ ನಮ್ಮ ಪಾಲಿಗೆ ಸಾವು. ನಾವು ಕೆಲಸ ಮಾಡುವುದನ್ನು ನಿಲ್ಲಿಸಿದಷ್ಟೂ ಹೆಚ್ಚು ಹೆಚ್ಚು ಮೃತಪ್ರಾಯರಾಗುತ್ತೇವೆ. ದೇಹದ ಮತ್ತು ಮನಸ್ಸಿನ ಆರೋಗ್ಯಕ್ಕೆ ಕ್ರಿಯೆ ಆವಶ್ಯಕ. ನಮ್ಮ ಮಿದುಳನ್ನು ಹೆಚ್ಚು ಹೆಚ್ಚು ಕ್ರಿಯೆಯಲ್ಲಿ ತೊಡಗಿಸಿದಷ್ಟು ಅದರ ಸಾಮರ್ಥ್ಯ ಅಧಿಕವಾಗುತ್ತ ಹೋಗುತ್ತದೆ. ನಮ್ಮ ಆಂತರಿಕ ಪ್ರತಿಭೆ ಸಾಮರ್ಥ್ಯಗಳು ವ್ಯಕ್ತವಾಗುವುದೇ ಕೆಲಸದ ಮೂಲಕ. ಆಂಗ್ಲಭಾಷೆಯಲ್ಲಿ ಒಂದು ಹೇಳಿಕೆ ಇದೆ: "ಮಿಣುಕುಹುಳುವು ಬೆಳಗುವುದು ಅದು ಹಾರುತ್ತಿರುವಾಗಲೇ." ಹಾರುತ್ತಿರುವುದೆಂದರೆ ಕ್ರಿಯಾಶೀಲವಾಗಿರುವುದು. ಮಿಣುಕುಹುಳು ಸುಮ್ಮನೆ ಕುಳಿತಿದ್ದರೆ ಅದರ ಇರವೇ ತಿಳಿಯುವುದಿಲ್ಲ. ನಮ್ಮ ಜೀವನವೂ ಕೂಡ ಬೆಳಗುವುದು ನಾವು ಕ್ರಿಯಾಶೀಲರಾಗಿದ್ದಾಗಲೇ. **ಯಃ ಕ್ರಿಯಾವಾನ್ ಸ ಪಂಡಿತಃ**—"ಯಾರು ಕ್ರಿಯಾಶೀಲನೊ ಅವನೇ ಜ್ಞಾನಿ"—ಎಂಬ ಸಂಸ್ಕೃತ ಹೇಳಿಕೆಯೊಂದಿದೆ. **ಉದ್ಯೋಗಿನಂ ಪುರುಷಸಿಂಹಂ ಉಪೈತಿ ಲಕ್ಷ್ಮೀಃ**—"ಉದ್ಯೋಗವುಳ್ಳವನನ್ನೂ ಪುರುಷಸಿಂಹನನ್ನೂ ಐಶ್ವರ್ಯ ಸಮೀಪಿಸುತ್ತದೆ"—ಎಂಬ ಸಂಸ್ಕೃತ ಹೇಳಿಕೆಯನ್ನು ಸ್ವಾಮಿ ವಿವೇಕಾನಂದರು ಮತ್ತೆ ಮತ್ತೆ ಉಚ್ಚರಿಸುತ್ತಿದ್ದರು. "ಮಾನವನೆಂದರೆ ಕರ್ಮಜೀವಿ, ಅದಿಲ್ಲದಿದ್ದರೆ ಅವನು ನಿರ್ಜೀವಿ" ಎಂದು ಜೋಸೆಫ್ ಕಾನ್ರಾಡ್ ಎಂಬ ಪಾಶ್ಚಾತ್ಯ ಚಿಂತಕ ಹೇಳುತ್ತಾನೆ.

ಅನೇಕರು ಕ್ರಿಯಾಶೀಲರಾಗಿರುತ್ತಾರೆ, ಆದರೆ ವ್ಯವಸ್ಥಿತವಾಗಿ ಏನನ್ನೂ ಮಾಡುವುದಿಲ್ಲ. ಒಂದು ಕೆಲಸವನ್ನು ತೆಗೆದುಕೊಳ್ಳುತ್ತಾರೆ, ಅದನ್ನು ಅರ್ಧದಲ್ಲಿಯೇ ಬಿಡುತ್ತಾರೆ, ಮತ್ತೊಂದನ್ನು ತೆಗೆದುಕೊಳ್ಳುತ್ತಾರೆ. ಹೀಗೆ ಯಾವ ಕೆಲಸವನ್ನೂ ಸರಿಯಾಗಿ ಮಾಡುವುದಿಲ್ಲ. ಸ್ವಲ್ಪ ಅಡಚಣೆಯಾದರೆ ಸಾಕು ಹಿಂಜರಿಯುತ್ತಾರೆ. ಹಿಡಿದ ಕೆಲಸವನ್ನು ಪಟ್ಟು ಹಿಡಿದು ಮಾಡಿ ಮುಗಿಸುವ ಛಲ ಅವರಿಗಿರುವುದಿಲ್ಲ. ಇದಕ್ಕೆ ಸತತ ಪ್ರಯತ್ನ ಆವಶ್ಯಕ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಒಂದು ಸಲಕ್ಕೆ ಒಂದೇ ಕಾರ್ಯವನ್ನು ತೆಗೆದುಕೊಳ್ಳಿ ಮತ್ತು ಇತರೆಲ್ಲ ವಿಚಾರಗಳನ್ನು ಬದಿಗಿಟ್ಟು ನಿಮ್ಮ ಹೃನ್ಮನಗಳನ್ನು ಸಂಪೂರ್ಣವಾಗಿ ಆ ಕಾರ್ಯದಲ್ಲಿ ತೊಡಗಿಸಿರಿ."

ವಿದ್ಯಾರ್ಥಿಗಳು ಸಾಮಾನ್ಯವಾಗಿ ಒಂದು ವಿಷಯವನ್ನು ಓದಲು ತೆಗೆದುಕೊಳ್ಳುತ್ತಾರೆ. ಅದರಲ್ಲಿ ಸ್ವಲ್ಪ ಬೇಸರವಾದ ಕೂಡಲೇ ಬೇರೊಂದು ವಿಷಯವನ್ನು ತೆಗೆದುಕೊಳ್ಳುತ್ತಾರೆ ಅಥವಾ ಇನ್ನಾವುದರ ಕಡೆಗೊ ಗಮನ ಹರಿಸುತ್ತಾರೆ. ಹೀಗೆ ಯಾವುದನ್ನೂ ಸರಿಯಾಗಿ ಅಧ್ಯಯನ ಮಾಡಲಾಗದೆ

ಹತಾಶರಾಗುತ್ತಾರೆ, ಗೊಂದಲಕ್ಕೊಳಗಾಗುತ್ತಾರೆ. ವಿದ್ಯಾರ್ಥಿಗಳು ದೃಢಮನಸ್ಕರಾಗಿ ಚಂಚಲತೆಗೆ ಒಳಗಾಗದೆ ಹಿಡಿದ ಕೆಲಸವನ್ನು ಎಡೆಬಿಡದೆ ಮಾಡಿಮುಗಿಸುವ ಸ್ಥಿರತೆಯನ್ನು ಹೊಂದಿರಬೇಕು. "ಸರ್ವಪ್ರಯತ್ನವನ್ನೂ ಸರ್ವಕಾಲದಲ್ಲೂ ಒಂದೇ ವಿಷಯದಲ್ಲಿ ಏಕತ್ರಗೊಳಿಸುವುದೇ ಯಶಸ್ಸಿನ ರಹಸ್ಯ" (ಅನಾಮಿಕ). ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ನೀವು ಯಶಸ್ವಿಗಳಾಗಬೇಕಿದ್ದರೆ ನಿಮ್ಮಲ್ಲಿ ಪ್ರಚಂಡ ಛಲವಿರಬೇಕಾಗುತ್ತದೆ, ಪ್ರಬಲ ಇಚ್ಛಾಶಕ್ತಿಯಿರಬೇಕಾಗುತ್ತದೆ. 'ನಾನು ಸಮುದ್ರವನ್ನೇ ಹೀರಿಬಿಡುತ್ತೇನೆ' ಎನ್ನುತ್ತಾನೆ ಛಲವಾದಿ. 'ನನ್ನ ಇಚ್ಛಾಮಾತ್ರದಿಂದ ಪರ್ವತಗಳೇ ಪುಡಿಪುಡಿಯಾಗುವುವು' ಎನ್ನುತ್ತಾನೆ ಅವನು. ನಿಮ್ಮಲ್ಲಿ ಈ ಬಗೆಯ ಛಲವಿರಲಿ. ನಿಮ್ಮಲ್ಲಿ ಈ ಬಗೆಯ ಇಚ್ಛಾಶಕ್ತಿಯಿರಲಿ. ಶ್ರಮವಹಿಸಿ ಕಾರ್ಯಮಗ್ನರಾಗಿ. ನೀವು ಗುರಿ ಸೇರುವುದು ಖಂಡಿತ."

ಒಬ್ಬ ಅತ್ಯಂತ ದಡ್ಡ ಬಾಲಕನಿದ್ದ. ಅವನಿಗೆ ಕಲಿಸುವ ಕಾರ್ಯದಲ್ಲಿ ಎಲ್ಲ ಉಪಾಧ್ಯಾಯರೂ ಸೋಲೊಪ್ಪಿಕೊಂಡರು. ಎಲ್ಲ ಶಾಲೆಗಳಿಂದಲೂ ಅವನು ಹಿಂತಿರುಗಿ ಬರಬೇಕಾಯಿತು. ನಿರಾಶೆಯ ಕಾರ್ಮೋಡ ಅವನ ಮನಸ್ಸನ್ನು ಆವರಿಸಿ ಅವನ ದಡ್ಡತನ ಅಧಿಕವಾಗುತ್ತಲೇ ಹೋಯಿತು. ತಾನು ಕೆಲಸಕ್ಕೆ ಬಾರದವನೆಂಬ ಕೀಳರಿಮೆ ಅವನನ್ನು ತುಂಬ ಬಾಧಿಸಿತ್ತು. ಎಲ್ಲರ ತಿರಸ್ಕಾರಕ್ಕೂ ಅವನು ಒಳಗಾಗಿದ್ದ. ಈ ತಿರಸ್ಕಾರದ ವಾತಾವರಣದಲ್ಲಿ ಅವನಿಗೆ ಇರಲಾಗದೆ ಊರೂರು ಅಲೆಯತೊಡಗಿದ.

ಒಂದು ದಿನ ಅವನು ಒಂದು ಹಳ್ಳಿಯ ಬಾವಿಯ ಹತ್ತಿರ ನಿಂತುಕೊಂಡಿದ್ದ. ಚಿಂತಾಕ್ರಾಂತನಾಗಿದ್ದ. ಅವನ ಗಮನ ಬಾವಿಯ ಕಟ್ಟೆಯ ಮೇಲೆ ಹಾಸಿದ್ದ ಚಪ್ಪಡಿ ಕಲ್ಲಿನ ಮೇಲೆ ಬಿತ್ತು. ಅದರಲ್ಲಿದ್ದ ಒಂದು ಹೊಂಡ ವಿಶೇಷವಾಗಿ ಅವನ ಗಮನ ಸೆಳೆಯಿತು. ಆ ಹೊಂಡ ಹೇಗಾಯಿತು ಎಂದು ಆಲೋಚಿಸತೊಡಗಿದ. ಅವನು ಕಂಡ ದೃಶ್ಯ ಅವನ ಬುದ್ಧಿಗೆ ಚುರುಕು ಮುಟ್ಟಿಸಿತು, ದಡ್ಡತನದ ಮುಸುಕು ಸರಿಯತೊಡಗಿತು. ಅನೇಕ ವರ್ಷಗಳಿಂದ ಮಹಿಳೆಯರು ಬಿಂದಿಗೆಯಲ್ಲಿ ನೀರು ಸೇದಿ ಆ ಕಲ್ಲುಚಪ್ಪಡಿಯ ಮೇಲೆ ಇಡುತ್ತಿರುವುದರಿಂದ ಆ ಹೊಂಡ ಉಂಟಾಗಿದೆ ಎಂಬ ಸತ್ಯಾಂಶ ಆ ದಡ್ಡನ ಬುದ್ಧಿಗೂ ಗೋಚರವಾಯಿತು. ದಿನನಿತ್ಯದ ಸಣ್ಣ ಕ್ರಿಯೆಗಳು ಆ ಕಠಿಣ ಕಲ್ಲಿನ ಮೇಲೆಯೂ ಅಂಥ ಒಂದು ವಿಶಿಷ್ಟ ಪರಿಣಾಮವನ್ನು ಉಂಟುಮಾಡಿರುವಾಗ ಸತತ ಪ್ರಯತ್ನದಿಂದ ನಾನೇಕೆ ಬುದ್ಧಿವಂತನಾಗಬಾರದು ಎಂದು ಆತ ಆಲೋಚಿಸತೊಡಗಿದ. ಈ ಆಲೋಚನೆಯೇ ಅವನಿಗೆ ಸ್ಫೂರ್ತಿಯಾಯಿತು. ಅವನು ಕಾರ್ಯೋನ್ಮುಖನಾದ. ಅವನು ಮುಂದೆ ಎಂಥ ದೊಡ್ಡ ವಿದ್ವಾಂಸನಾದನೆಂದರೆ ಪಾಣಿನಿಯ ವ್ಯಾಕರಣಸೂತ್ರಗಳ ಮೇಲೆ "ಸಿದ್ಧಾಂತ ಕೌಮುದಿ" ಎಂಬ ಮಹಾ ಗ್ರಂಥವನ್ನು ಬರೆದ. ಪಾಣಿನಿಯ ಸಂಸ್ಕೃತ ವ್ಯಾಕರಣವನ್ನು ಅಧ್ಯಯನ ಮಾಡುವವರೆಲ್ಲರೂ ಈ ಗ್ರಂಥವನ್ನು ಓದಲೇಬೇಕು. ಅವನ ಹೆಸರು ಭಟ್ಟೋಜಿ ದೀಕ್ಷಿತ.

ಅತ್ಯಂತ ಬಡ ಕುಟುಂಬದಲ್ಲಿ ಜನಿಸಿದ ಸರ್ ಎಂ. ವಿಶ್ವೇಶ್ವರಯ್ಯನವರು ತಮ್ಮ ಸ್ವಂತ ಪರಿಶ್ರಮದಿಂದಲೇ ಉನ್ನತಿಗೇರಿದರು. ಅವರು ಹೇಳುತ್ತಾರೆ: "ನನ್ನ ವ್ಯಕ್ತಿತ್ವದ ರಹಸ್ಯವನ್ನು ಸಾರಾಂಶವಾಗಿ ಹೀಗೆ ಹೇಳಬಹುದು: ಕಷ್ಟಪಟ್ಟು ಕೆಲಸಮಾಡುವುದು, ಶಿಸ್ತುಬದ್ಧ ಸರಳ ಜೀವನ ನಡೆಸುವುದು ಮತ್ತು ಸದಾ ಸಂತೃಪ್ತನೂ ಸಂತುಷ್ಟನೂ ಆಗಿರುವುದು."

ಜನಪ್ರಿಯ 'ಫೋರ್ಡ್' ಕಾರಿನ ನಿರ್ಮಾಪಕ ಹೆನ್ರಿ ಫೋರ್ಡ್ ಹೇಳುವ ಮಾತು ಸ್ಮರಣೀಯ: "ನನ್ನ ಜೀವನದ ಯಶಸ್ಸಿಗೆ ಮೂರು ಮುಖ್ಯ ರಹಸ್ಯಗಳಿವೆ: ಪರಿಶ್ರಮ, ಪರಿಶ್ರಮ ಮತ್ತು ಪರಿಶ್ರಮ."

## ಪ್ರಹಸನ ಪ್ರಸಂಗ

**ನರ್ಸ್:** ಏನು? ಇಂದು ಬೆಳಿಗ್ಗೆ ನಿನ್ನೆಗಿಂತ ಸಲೀಸಾಗಿ ಕೆಮ್ಮುತ್ತಿದ್ದೀರಲ್ಲಾ?

**ರೋಗಿ:** ಮತ್ತಿನ್ನೇನು? ಇಡೀ ರಾತ್ರಿ ಅಭ್ಯಾಸ ಮಾಡಿದ್ದೇನೆ!

**ಪುಸ್ತಕ ವ್ಯಾಪಾರಿ:** ಈ ಪುಸ್ತಕದಲ್ಲಿರುವ ಉತ್ತರಗಳಿಂದ ಪರೀಕ್ಷೆಯಲ್ಲಿ ಬರುವ ಪ್ರಶ್ನೆಗಳ ಅರ್ಧದಷ್ಟನ್ನು ಉತ್ತರಿಸಬಹುದು.

**ವಿದ್ಯಾರ್ಥಿ** : ಹಾಗಾದರೆ ಪುಸ್ತಕದ ಎರಡು ಪ್ರತಿಗಳನ್ನು ಕೊಡಿ!

**ಗಂಡ:** ನೋಡೆ, ಆ ನಾಯಿ ಎಂದಿಗೂ ನೀನು ಹೇಳಿದ ಮಾತನ್ನು ಕೇಳುವುದಿಲ್ಲ. ನಿನ್ನಿಂದ ಅದು ಅಸಾಧ್ಯ.

**ಹೆಂಡತಿ:** ಸುಮ್ಮಿರಿ ಸಾಕು. ತಾಳ್ಮೆಯಿದ್ದರೆ ಯಾಕೆ ಸಾಧ್ಯವಿಲ್ಲ? ಮೊದಮೊದಲು ನಾನು ನಿಮ್ಮೊಂದಿಗೂ ಬಹಳ ಕಷ್ಟಪಟ್ಟಿಲ್ಲವೇ!

**ಮೇಷ್ಟ್ರು:** ಹಸಿರು ತರಕಾರಿಗಳನ್ನು ತಿನ್ನುವುದು ಕಣ್ಣಿನ ಆರೋಗ್ಯಕ್ಕೆ ಉತ್ತಮವೆಂದು ಹೇಗೆ ಸಾಬೀತು ಪಡಿಸುವೆ?

**ವಿದ್ಯಾರ್ಥಿ:** ಸುಲಭ ಸಾರ್! ಯಾವುದಾದರೂ ಹಸು ಕನ್ನಡಕ ಬಳಸುವುದನ್ನು ನೀವು ಕಂಡಿದ್ದೀರ?